ಬಡಾವಣೆಗಳಿಗೆ ನೀರಿನ ಸೌಕರ್ಯ ಒದಗಿಸುವುದು

1124 (1611); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಹೊಸದಾಗಿ ರಚಿತವಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದ ಹಳ್ಳಿಗಳು ಮತ್ತು ಅವುಗಳಿಗೆ ಸೇರಿದಂತಿರುವ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಮತ್ತು ಒಳಚರಂಡಿ ಸೌಲಭ್ಯ ಒದಗಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು);

ಆ) ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದ ಬಡಾವಣೆಗಳಲ್ಲಿರುವ ಮನೆಗಳವರು ನೀರಿನ ಸಂಪರ್ಕ ಪಡೆಯಲು ಮತ್ತು ಈಗಾಗಲೇ ಬಡಾವಣೆಯ ಸೊಸೈಟಿಗಳು, ಗ್ರಾಮ ಪಂಚಾಯಿತಿಗಳ ಮೂಲಕ ಹೊಂದಿರುವ ನೀರಿನ ಸಂಪರ್ಕವನ್ನು ಅಧಿಕೃತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳೇನು; ಈ ಬಗ್ಗೆ ನೀರು ಸರಬರಾಜು ಮಂಡಳಿಯು ಸಾರ್ವಜನಿಕರಿಗೆ ತಿಳುವಳಿಕೆ ಮತ್ತು ಸೂಚನೆಗಳನ್ನು ನೀಡಿರುತ್ತದೆಯೇ (ವಿವರ ಒದಗಿಸುವುದು);

ಇ) ಈ ವ್ಯಾಪ್ತಿಗೆ ಬಂದ ಯಾವ ಯಾವ ಪ್ರದೇಶಗಳಿಗೆ ಕಾವೇರಿ/ತಿಪ್ಪಗೊಂಡನಹಳ್ಳಿ ನೀರಿನ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ (ವಿವರ ಒದಗಿಸುವುದು);

ಈ) ಹೇರೋಹಳ್ಳಿ ವಾರ್ಡ್ ಪ್ರದೇಶದ ಬಡಾವಣೆಗಳಿಗೆ ಕಲ್ಪಿಸಿರುವ ಕುಡಿಯುವ ನೀರು, ಒಳಚರಂಡಿ ಸೌಲಭ್ಯಗಳೇನು (ವಿವರ ಒದಗಿಸುವುದು)?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)

ಅ) ಇಂದ ಇ) ಸರ್ಕಾರದ ಪತ್ರ ಸಂಖ್ಯೆ: ನಅಇ 269 ಎಂ.ಎನ್.ಐ. 2010, ದಿನಾಂಕ: 27.01.2014 ಮತ್ತು ಸಂಖ್ಯೆ: ಡಬ್ಲ್ಯೂಆರ್‌ಡಿ 60

ಎಂ.ಎಂ.ಕೆ 2013, ದಿನಾಂಕ: 2.1.2014 ರಲ್ಲಿ ವಾರ್ಷಿಕ 10 ಸಾವಿರ ದಶಲಕ್ಷ ಘನ ಅಡಿ (ಟಿ.ಎಂ.ಸಿ.) ಕಾವೇರಿ ನೀರನ್ನು 110 ಹಳ್ಳಿಗಳಿಗೆ ಸರಬರಾಜು ಮಾಡಲು ಪ್ರತ್ಯೇಕವಾಗಿ ಅನುಮತಿ ನೀಡಲಾಗಿರುತ್ತದೆ.

ಕಾವೇರಿ ನದಿ ಪಾತ್ರದಿಂದ ಬೆಂಗಳೂರು ನಗರಕ್ಕೆ ತರಲು ಕಾವೇರಿ 5ನೇ ಹಂತ ಎರಡು ಘಟ್ಟಗಳಲ್ಲಿ ಯೋಜನೆ ರೂಪಿಸಿದ್ದು, ಮೊದಲನೇ ಘಟ್ಟದಲ್ಲಿ ದಿನಂಪ್ರತಿ 500 ದಶಲಕ್ಷ ಲೀಟರ್ ಆಯೋಜಿಸಿರುತ್ತದೆ. ಇದಕ್ಕೆ ಅಗತ್ಯವಿರುವ ವಿಸ್ತೃತವಾದ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಲು ಹಾಲಿ ಇರುವ ಮೆ॥ ನಿಪೋನ್ ಜೋಗಿಸಿಡೋ ಸೆಕ್ಕಿ ಕೋ. ಲಿಮಿಟೆಡ್, ಜಪಾನ್, ಮೆ॥ ಮೊಟ್ ಮ್ಯಾಕ್‌ಡೊನಾಲ್ಡ್ ಲಿಮಿಟೆಡ್, ಯು.ಕೆ., ಮತ್ತು ಟಾಟಾ ಕನ್ಸಲ್ಟೆಂಟ್ ಇಂಜಿನಿಯರ್ಸ್ ಲಿಮಿಟೆಡ್, ಇಂಡಿಯಾ (ಎನ್.ಎಂ.ಟಿ. ಸಂಸ್ಥೆ) ಇವರಿಗೆ ನೀಡಲಾಗುತ್ತದೆ. ಯೋಜನಾ ವರದಿಯನ್ನು ತಯಾರಿಸಲು ತಗಲುವ ವೆಚ್ಚ ಜೈಕಾ ಸಂಸ್ಥೆಯಿಂದ ಪಡೆಯಲಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸುವ ಯೋಜನೆ ರೂಪಿಸಿದ್ದು, ವಿಸ್ತೃತವಾದ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಿ, ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯಕ್ಕೆ ತಾಂತ್ರಿಕ ಅನುಮೋದನೆ ಹಾಗೂ ಆರ್ಥಿಕ ನೆರವು ಕೋರಿ ಸಲ್ಲಿಸಿದಾಗ ನಗರಾಭಿವೃದ್ಧಿ ಮಂತ್ರಾಲಯದಡಿ ಬರುವ (CPHEEO) ತಾಂತ್ರಿಕ ಸಂಸ್ಥೆ ಸದರಿ ವರದಿಯನ್ನು ಪರಿಶೀಲಿಸಿ, ಹಲವು ಸಲಹೆಗಳನ್ನು ಸೂಚಿಸಿ, ಅದರಂತೆ ಮಾರ್ಪಾಡು ಮಾಡಿ ಪುನರ್ ಸಲ್ಲಿಸಲು ಸೂಚಿಸಿರುತ್ತದೆ. ಸಂಸ್ಥೆಯ ಸಲಹೆಯಂತೆ ಪರಿಷ್ಕೃತ ಯೋಜನಾ ವರದಿ ತಯಾರಿಸಲಾಗಿದೆ. ಈ ಯೋಜನಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಮುಂದುವರೆದಂತೆ, 110 ಹಳ್ಳಿಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾರ್ಯಕ್ಕಾಗಿ ₹ 5019 ಕೋಟಿಗಳ ಬೃಹತ್ ಯೋಜನೆಗೆ ಪರಿಷ್ಕೃತ ಯೋಜನಾ ವರದಿ ತಯಾರಿಸಲಾಗಿದ್ದು, ಇದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅನುಮತಿ ಪಡೆದು, ಹಣಕಾಸಿನ ನೆರವಿಗಾಗಿ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಈ) ಪ್ರಸ್ತುತ ಹೇರೋಹಳ್ಳಿ ವಾರ್ಡ್‌ನಲ್ಲಿ ವಾಸಿಸುವ ನಾಗರೀಕರಿಗೆ ಎರಡು ದಿನಕ್ಕೊಮ್ಮೆ ಕೊಳವೆ ಬಾವಿಗಳ ಮುಖಾಂತರ ಕುಡಿಯುವ ನೀರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಬರಾಜು ಮಾಡಿ ನೀರಿನ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ.

ಹೇರೋಹಳ್ಳಿ ವಾರ್ಡ್ ಪ್ರದೇಶದ ಬಡಾವಣೆಗಳಲ್ಲಿ ಪ್ರಸ್ತುತ ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವುದಿಲ್ಲ, ಇಲ್ಲಿ ಹಿಂದೆ ಇರುವಂತಹ ವ್ಯವಸ್ಥೆಯನ್ನೇ ಮುಂದುವರಿಸಲಾಗಿದೆ.

ಹೇರೋಹಳ್ಳಿ ವಾರ್ಡ್ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಒಂದಾಗಿದ್ದು, ಇಲ್ಲಿಗೆ ಶಾಶ್ವತ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ಸೌಲಭ್ಯಗಳನ್ನು ಕಲ್ಪಿಸಲು ಯೋಜನೆಗೆ ಅನುಮೋದನೆ ಮತ್ತು ಹಣಕಾಸಿನ ನೆರವು ಪಡೆದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.